# ರಾಜ್ಯ ವಿಧಾನಸಭೆಯಲ್ಲಿಲ್ಲ ನೈತಿಕ ಸಮಿತಿ

## ಶಾಸಕರನ್ನು ನಿಯಂತ್ರಿಸಲು, ಜನಪ್ರತಿನಿಧಿಗಳ ಘನತೆ ಕಾಪಾಡಲು ಬೇಕಿರುವ ಸಮಿತಿ

• ಶಂಕರ ಪಾಗೋಜಿ

**ಬೆಂಗಳೂರು:** ರಾಜ್ಯ ವಿಧಾನಸಭಾ ಸದಸ್ಯರ ಹೇಳಿಕೆಗಳು ಹಾಗೂ ನಡವಳಿಕೆಗಳು ಆಕ್ಷೇಪಾರ್ಹವಾಗಿದ್ದರೂ ಅದನ್ನು ನಿಯಂತ್ರಿಸಲು ವಿಧಾನಮಂಡಲದ ಮೇಲ್ಮನೆಯಲ್ಲಿರುವಂತೆ ವಿಧಾನಸಭೆಯಲ್ಲಿ ಇದುವರೆಗೂ ನೈತಿಕ ಸಮಿತಿ (ಎಥಿಕ್ಸ್ ಕಮಿಟಿ) ರಚನೆಯಾಗಿಲ್ಲ. ಶಾಸಕರು ತಮ್ಮ ನೈತಿಕತೆಯನ್ನು ಮೀರಿ ನಡೆದುಕೊಂಡರೆ ಅವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲು ದೇಶದ ಎಲ್ಲ ಶಾಸನ ಸಭೆಗಳಲ್ಲಿ ಇರುವ ನೈತಿಕ ಸಮಿತಿ ರಾಜ್ಯ ವಿಧಾನಸಭೆಯ ಇತಿಹಾಸದಲ್ಲಿ ಇದುವರೆಗೂ ರಚನೆಯಾಗಿಲ್ಲ.

2005ರಿಂದ ರಾಜ್ಯ ವಿಧಾನ ಪರಿಷತ್‌ನಲ್ಲಿ ನೈತಿಕ ಸಮಿತಿ (ಎಥಿಕ್ಸ್ ಕಮಿಟಿ) ಕಾರ್ಯ ನಿರ್ವಹಿಸುತ್ತಿದ್ದು, ವಿಧಾನಸಭೆಯಲ್ಲಿ ಮಾತ್ರ ಯಾವ ಸಭಾಧ್ಯಕ್ಷರೂ ಈ ಸಮಿತಿ ರಚಿಸುವ ಗೋಜಿಗೆ ಹೋಗಿಲ್ಲ.

ಇತ್ತೀಚಿನ ದಿನಗಳಲ್ಲಿ ಜನ ಪ್ರತಿನಿಧಿಗಳು ಸಾರ್ವಜನಿಕವಾಗಿ, ಖಾಸಗಿಯಾಗಿ, ವಿಧಾನಸಭೆ, ವಿಧಾನ ಪರಿಷತ್, ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ನಡೆದುಕೊಳ್ಳುತ್ತಿರುವ ಘಟನೆಗಳನ್ನು ಗಮನಿಸಿ ಅವರ ನೈತಿಕತೆಯ ಬಗ್ಗೆ ಸಾರ್ವಜನಿಕರು ಮಾತನಾಡಿಕೊಳ್ಳುವಂತಾಗಿದೆ. ಒಂದು ವೇಳೆ, ಶಾಸಕರು ಹಾಗೂ ಸಂಸದರ ನಡವಳಿಕೆಗಳು ಸಾರ್ವಜನಿಕವಾಗಿ ಆಕ್ಷೇಪಾರ್ಹವಾಗಿದ್ದರೆ, ದುಂಡಾವರ್ತನೆಯಿಂದ ನಡೆದುಕೊಂಡರೆ ಅವರ ವಿರುದ್ಧ ಕ್ರಮ ಕೈಗೊಳ್ಳಲು ವಿಧಾನಸಭೆ, ವಿಧಾನ ಪರಿಷತ್, ರಾಜ್ಯಸಭೆ ಹಾಗೂ ಲೋಕಸಭೆಗಳಲ್ಲಿ ನೈತಿಕ ಸಮಿತಿ (ಎಥಿಕ್ಸ್ ಕಮಿಟಿ) ರಚನೆ ಮಾಡಲಾಗುತ್ತದೆ.

**ಎಥಿಕ್ಸ್ ಕಮಿಟಿ ಯಾಕೆ?:** ಇತ್ತೀಚಿನ ದಿನಗಳಲ್ಲಿ ರಾಜ್ಯ ವಿಧಾನಸಭೆಯ ಒಳಗೆ ಹಾಗೂ ಹೊರಗೆ ವಿಧಾನಸಭಾ ಸದಸ್ಯರು ನಡೆದುಕೊಳ್ಳುವ ರೀತಿ, ಅವರ ಮಾತುಗಳು, ಬಳಸುವ ಭಾಷೆಯ ಬಗ್ಗೆ ಸಾರ್ವಜನಿಕವಾಗಿ ಸಾಕಷ್ಟು ಆಕ್ಷೇಪಗಳು ಕೇಳಿ ಬರುತ್ತಿವೆ. ಅಲ್ಲದೇ ಕೆಲವು ಘಟನೆಗಳು ಜನಪ್ರತಿನಿಧಿಗಳ ವ್ಯಕ್ತಿತ್ವ ಹಾಗೂ ವಿಧಾನಸಭೆಯ ಘನತೆಗೆ ಧಕ್ಕೆ ತರುವಂತೆ ನಡೆಯುತ್ತಿವೆ.

ವಿಶೇಷವಾಗಿ, ಪ್ರಸ್ತುತ ವಿಧಾನಸಭೆ ಅವಧಿಯಲ್ಲಿ ಕಾಂಗ್ರೆಸ್‌ನ ಕೆಲವು ಶಾಸಕರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವ ಸಂದರ್ಭದಲ್ಲಿ ನಡೆದ ಘಟನೆಗಳು, ಚಿಕ್ಕಬಳ್ಳಾಪುರ ಶಾಸಕ ಡಾ.ಸುಧಾಕರ್ ಅವರು ರಾಜೀನಾಮೆ ಸಲ್ಲಿಸಲು ತೆರಳುವ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಶಾಸಕರ ನಡುವೆ ನಡೆದ ತಳ್ಳಾಟ ಹಾಗೂ ಅವರು ನಡೆದುಕೊಂಡ ರೀತಿ ಸಾರ್ವಜನಿಕವಾಗಿ ಜನಪ್ರತಿನಿಧಿಗಳ ನಡವಳಿಕೆಯನ್ನು ಪ್ರಶ್ನಿಸುವಂತೆ ಮಾಡಿತ್ತು.

ಅಲ್ಲದೇ, ಇತ್ತೀಚೆಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಅವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಕುರಿತು ನೀಡಿದ ಹೇಳಿಕೆ. ಪ್ರಸ್ತುತ ವಿಧಾನಸಭೆ ಕಲಾಪದಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹಾಗೂ ಡಾ. ಸುಧಾಕರ ಅವರ ನಡುವೆ ನಡೆದ ಅವಾಚ್ಯ ಶಬ್ದಗಳ ಬಳಕೆ ಎಲ್ಲವೂ ಶಾಸಕರ ನೈತಿಕತೆಯನ್ನು ಪ್ರಶ್ನಿಸುವಂತಹ ಪ್ರಕರಣಗಳಾಗಿವೆ.

**ನೈತಿಕ ಸಮಿತಿಯ ಕಾರ್ಯವೇನು?:** ಶಾಸಕರ ದುರ್ವತನೆ ಹಾಗೂ ಜನಪ್ರತಿನಿಧಿಗಳ ಘನತೆಗೆ ಧಕ್ಕೆ ತರುವಂತೆ ಹಾಗೂ ಸಾರ್ವಜನಿಕವಾಗಿಯೂ ದುರ್ವರ್ತನೆ ತೋರಿದರೆ, ಅಂತಹ ಶಾಸಕರ ವಿರುದ್ಧ ನೈತಿಕ ಸಮಿತಿಗೆ ದೂರು ನೀಡಲು ಅವಕಾಶವಿದೆ. ಸಂಬಂಧಪಟ್ಟ ಶಾಸಕರ ವಿರುದ್ಧ ಸಾರ್ವಜನಿಕರೂ ಸದನದ ಯಾವುದಾದರೂ ಸದಸ್ಯರ ಮೂಲಕ ನೈತಿಕ ಸಮಿತಿಗೆ ದೂರು ಸಲ್ಲಿಸಲು ಅವಕಾಶವಿದೆ.

ಈ ಸಮಿತಿ ಸಂಬಂಧಪಟ್ಟ ಶಾಸಕರನ್ನು ಕರೆಸಿ, ವಿಚಾರಣೆ ನಡೆಸುವ ಹಾಗೂ ಅವರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಿದ್ದರೆ, ಅವರಿಗೆ ಸದನದಲ್ಲಿ ಛೀಮಾರಿ ಹಾಕುವ, ಸದನದಿಂದ ಅವರನ್ನು ಅಮಾನತುಗೊಳಿಸುವ ಹಾಗೂ ಅವರ ಶಾಸಕತ್ವವನ್ನು ರದ್ದುಗೊಳಿಸುವಂತೆ ಸ್ಪೀಕರ್‌ಗೆ ಶಿಫಾರಸು ಮಾಡುವ ಅಧಿಕಾರ ಹೊಂದಿರುತ್ತದೆ.

ಈ ಸಮಿತಿ ನೀಡುವ ವರದಿಯನ್ನು ವಿಧಾನಸಭಾಧ್ಯಕ್ಷರು ಸದನದ ಮುಂದೆ ತಂದು, ಈ ಬಗ್ಗೆ ಚರ್ಚೆಗೆ ಅವಕಾಶ ಕಲ್ಪಿಸಿ, ಸಂಬಂಧ ಪಟ್ಟ ಶಾಸಕರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದು. ಗಂಭೀರ ಪ್ರಕರಣವಾಗಿದ್ದರೆ, ಅವರ ಶಾಸಕತ್ವ ರದ್ದುಪಡಿಸುವಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಬಹುದು.

**ಹಕ್ಕುಬಾಧ್ಯತೆಗೂ, ನೈತಿಕ ಸಮಿತಿಗೂ ವ್ಯತ್ಯಾಸ:** ವಿಧಾನಸಭೆಯಲ್ಲಿ ನಿಯಮಗಳ ಪ್ರಕಾರವೇ ಶಾಸಕರ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರಶ್ನಿಸಲು ಹಾಗೂ ತಪ್ಪಿತಸ್ಥ ಶಾಸಕರು, ಅಧಿಕಾರಿಗಳು ಹಾಗೂ ಸಾರ್ವಜನಿಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಹಕ್ಕುಬಾಧ್ಯತಾ ಸಮಿತಿಗೆ ಸ್ಪೀಕರ್ ಮೂಲಕ ಪ್ರಕರಣ ಒಪ್ಪಿಸಲು ಅವಕಾಶವಿದೆ. ಕಾನೂನು ಮೂಲಕವೇ ಶಾಸಕರಿಗೆ ಅವಕಾಶ ನೀಡಲಾಗಿದೆ.

ಆದರೆ, ಜನಪ್ರತಿನಿಧಿಗಳು ಕಾನೂನಿನ ಚೌಕಟ್ಟು ದಾಟಿದರೆ, ಅವರಿಗೆ ನೈತಿಕ ಜವಾಬ್ದಾರಿ ಮನದಟ್ಟು ಮಾಡುವ ಮೂಲಕ ನೈತಿಕತೆ ಮೀರಿ ನಡೆದುಕೊಂಡರೆ ಅವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲು ಈ ಸಮಿತಿಗೆ ಅಧಿಕಾರವಿದೆ.

### ಸಮಿತಿ ರಚನೆ ಸ್ಪೀಕರ್‌ಗೆ ಅಧಿಕಾರ

ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಹಾಗೂ ವಿಧಾನ ಪರಿಷತ್‌ಗಳಲ್ಲಿ ಎಥಿಕ್ಸ್ ಕಮಿಟಿ ನೇಮಕ ಮಾಡಲು ನಿಯಮಾವಳಿಗಳಲ್ಲಿಯೇ ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಲೋಕಸಭೆ, ರಾಜ್ಯಸಭೆ ಹಾಗೂ ರಾಜ್ಯ ವಿಧಾನಪರಿಷತ್‌ನಲ್ಲಿ ನೈತಿಕ ಸಮಿತಿ ರಚನೆಯಾಗಿದ್ದು, ಈ ಸಂಬಂಧ ಬರುವ ದೂರುಗಳನ್ನು ಆಲಿಸಿ ಸಭಾಧ್ಯಕ್ಷರಿಗೆ ಶಿಫಾರಸು ಮಾಡಲು ಅವಕಾಶ ಕಲ್ಪಿಸಲಾಗಿದೆ. ಎಥಿಕ್ಸ್ ಕಮಿಟಿಯನ್ನು ನೇಮಕ ಮಾಡಲು ವಿಧಾನಸಭಾಧ್ಯಕ್ಷರಿಗೆ ಅಧಿಕಾರವಿದ್ದು, ಈ ಸಮಿತಿಗೆ ಸ್ವತಃ ಅವರೇ ಅಧ್ಯಕ್ಷರಾಗಬಹುದು ಅಥವಾ ಎಲ್ಲ ಸದಸ್ಯರ ವಿಶ್ವಾಸವುಳ್ಳ ಹಿರಿಯ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡಿ, ಎಲ್ಲ ಪಕ್ಷಗಳ ಶಾಸಕರನ್ನು ಈ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡಬಹುದು.

ಇತ್ತೀಚೆಗೆ ಸದನದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದಾಗ ಸಭಾಧ್ಯಕ್ಷರು ಸದಸದ ಅನುಮತಿ ಪಡೆದು ಎಥಿಕ್ಸ್ ಕಮಿಟಿ ರಚನೆ ಮಾಡುವುದು ಸೂಕ್ತ. ಯಾಕೆಂದರೆ, ಶಾಸಕರ ನಡವಳಿಕೆ ಸದನದ ಒಳಗೆ ಹಾಗೂ ಹೊರಗೆ ಅತ್ಯಂತ ಮುಖ್ಯವಾಗಿರುತ್ತದೆ. ಸಂಸದೀಯ ವ್ಯವಸ್ಥೆ ಬಲಪಡಿಸಲು ಎಥಿಕ್ಸ್ ಕಮಿಟಿ ರಚನೆ ಮಾಡುವುದು ಸೂಕ್ತ.

• ವಿ.ಆರ್.ಸುದರ್ಶನ್, ವಿಧಾನ ಪರಿಷತ್ ಮಾಜಿ ಸಭಾಪತಿ

ಶಾಸಕರಿಗೆ ಶಿಕ್ಷೆ ಕೊಡಲು ಎಥಿಕ್ಸ್ ಕಮಿಟಿ ಮಾಡಬೇಕೆಂದೇನಿಲ್ಲ. ಆದರೆ, ಅಗತ್ಯ ಬಿದ್ದಾಗ ಸದನವನ್ನು ನಿಯಂತ್ರಿಸಲು, ಹತೋಟಿಗೆ ತರಲು ಸ್ಪೀಕರ್ ಬತ್ತಳಿಕೆಯಲ್ಲಿರುವ ಅಸ್ತ್ರವಾಗಿ ಬಳಸಲು ಈ ಸಮಿತಿ ಇರುವುದು ಸೂಕ್ತ.

• ಡಿ.ಎಚ್.ಶಂಕರ ಮೂರ್ತಿ, ವಿಧಾನ ಪರಿಷತ್ ಮಾಜಿ ಸಭಾಪತಿ